ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು

ದಿಃ 16-**02-2023**

ಮುಂದುವರೆದ ಪಾಟೀ ಸವಾಲುಃ ಎಸ್ ವಿ ಎಸ್ ವಕೀಲರಿಂದ

ನಾನು **3** ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ಈ ದಾವಾ ದಾಖಲು ಮಾಡಲು ನಾನೇ ಮಾಹಿತಿ ನೀಡಿರುತ್ತೇನೆ. ದಾವಾದಲ್ಲಿರುವ ಸಂಗತಿಗಳು ನನಗೆ ಗೊತ್ತು. ಈ ದಾವಾದಲ್ಲಿ ಪ್ರತಿವಾದಿಯರು ನಮ್ಮ ತೋಟಕ್ಕೆ ಬರಬಾರದು ಎಂದು ಕೇಳಿರುತ್ತೇನೆ. ಪ್ರತಿವಾದಿಯರು ಯಾವ ದಿನಾಂಕದಂದು ತೊಂದರೆ ಕೊಟ್ಟಿರುತ್ತಾರೆ ಎಂದು ಈಗ ಹೇಳಲು ನೆನಪಿಲ್ಲ. ದಾವಾದಲ್ಲಿ ಪ್ರತಿವಾದಿಯರು ತೊಂದರೆ ಕೊಟ್ಟ ದಿನಾಂಕ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ದಿಃ **04-08-2022** ರಂದು ನಾನು ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ನಾನು ದಾವಾ ದಾಖಲು ಮಾಡುವ ಪೂರ್ವದಲ್ಲಿ ದೂರು ನೀಡಿರುತ್ತೇನೆ, ಅದರ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಸ್ವೀಕೃತಿ ರಸೀದಿ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ-**5** ರಿಂದ **9** ಅನ್ನು ಯಾರ ಸ್ವತ್ತು ಎಂದು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಒಂದು ದಾವಾ ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಅದಾ ನಂ **117/21** ರಂತೆ ದಾವಾ ದಾಖಲು ಮಾಡಿದ್ದಾರೆ ಎಂದರೆ ಸಾಕ್ಷಿದಾರರು ಸುಳ್ಳು ದಾವಾ ದಾಖಲು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾವಾದಲ್ಲಿ ಏನು ಪರಿಹಾರ ಕೋರಿ ತಂದಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಸ ನಂ **1/5** ರಲ್ಲಿ ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ. ಸ ನಂ **1/5** ಕ್ಕೆ ಡಿಕ್ರಿ ಆದರೆ ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿದಾರರು ಡಿಕ್ರಿ ಆದರೆ ನನಗೆ ತೊಂದರೆ ಮಾಡುತ್ತಾರೆ ಎಂದು ನುಡಿಯುತ್ತಾರೆ. ಸ ನಂ **1/5** ರಲ್ಲಿ ಹಲವಾರು ಜನರ ಜಮೀನು ಇದೆ, ಯಾರು ಯಾರಿಗೆ ಎಷ್ಟು ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಸ ನಂ **1/5** ರಲ್ಲಿ ದಿಃ **19-01-2019** ರಂದು ಪ್ರತಿವಾದಿಗೆ ತೊಂದರೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆದ ಕಾರಣ ಪ್ರತಿವಾದಿಯರು ನನ್ನ ವಿರುದ್ಧ

ಪೋಲೀಸ್ ಠಾಣೆಗೆ ದೂರು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ **05** ಗುಂಟೆ ಜಮೀನನ್ನು ಸೇರಿಸಿ ದಾವಾ ತಂದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ದುರಸ್ತಿಯಾಗಿರುತ್ತದೆ. ನಾನು ಆಕಾರ್ ಬಂಧ್ ದುರಸ್ತಿ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸ ನಂ **3** ರಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. **1999** ರಲ್ಲಿ ದಾವಾ ಅಸ್ತಿಯನ್ನು ಅಳತೆ ಮಾಡಿಸಿರುತ್ತೇನೆ. ಅಳತೆ ಮಾಡಲು ನಾನು ಅರ್ಜಿ ಕೊಟ್ಟಿರುತ್ತೇನೆ, ಆದರೆ ದಿನಾಂಕ ನೆನಪಿಲ್ಲ. ನಾನು ದಾವಾ ಅಸ್ತಿ ಖರೀದಿ ಮಾಡಿದ ನಂತರ ಸರ್ವೆ ಮಾಡಲು ಅರ್ಜಿ ಕೊಟ್ಟಿರುವುದಿಲ್ಲ. ಅರ್ಜಿ ಕೊಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗಾಗಿ **ಕಾಲಾವಕಾಶ** **ಕೋರಿದ್ದು,** ನೀಡಿ ಮುಂದೂಡಲಾಯಿತು)

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು, ಸಕಲೇಶಪುರ